# ಕಪಿಲ್‌ದೇವ್ ಜನಪ್ರಿಯತೆ



'80ರ ದಶಕದಲ್ಲಿ ಮೀಸೆ ಮೂಡುತ್ತಿದ್ದ ಕ್ರಿಕೆಟ್ ಅಭಿಮಾನಿ ತರುಣರೆಲ್ಲ ಈಗ ನಿವೃತ್ತಿಯ ಅಂಚಿನಲ್ಲಿದ್ದಾರೆ. ಆದರೆ ಅವರೆಲ್ಲರ ನೆನಪಲ್ಲಿ 'ಜೂನ್ 25, 1983' ಚಿರಸ್ಥಾಯಿಯಾಗಿದೆ. ಅವತ್ತು ನಾವು ಮೊತ್ತಮೊದಲ 'ಕ್ರಿಕೆಟ್ ವಿಶ್ವಕಪ್' ಗೆದ್ದ ದಿನ. ಕ್ರಿಕೆಟ್ ಲೋಕದಲ್ಲಿ ಅಲ್ಲಿಂದೀಚೆಗೆ ಶುರುವಾದ ಭಾರತದ ಜೈತ್ರಯಾತ್ರೆ ಈಗಲೂ ಮುಂದುವರಿದಿದೆ. ಹಾಗೆಯೇ ಅವತ್ತು ಭಾರತದ ಕ್ರಿಕೆಟ್ ತಂಡವನ್ನು ಕಪ್ತಾನನಾಗಿ ಮುನ್ನಡೆಸಿದ ಕಪಿಲ್‌ದೇವ್. 61ರ ಅಂಚಿನಲ್ಲಿರುವ ಕಪಿಲ್ ಪಾಜಿ, ಈಗಲೂ 25ರ ತರುಣನಂತೆ ಕಂಗೊಳಿಸುತ್ತಿದ್ದಾರೆ. ಅದಕ್ಕೆ ಮುಖ್ಯ ಕಾರಣ ಹೊಸ ಸಿನಿಮಾ. ಆ ಸಿನಿಮಾದ ಹೆಸರು '83'. ಭಾರತ ಮೊತ್ತ ಮೊದಲ ವಿಶ್ವಕಪ್ ಗೆದ್ದ ಕಥೆ ಹೇಳುವ ಸಿನಿಮಾ. 60 ದಾಟಿದ ಕಪಿಲ್‌ದೇವ್ ಪಾತ್ರವನ್ನು ಈ ಸಿನಿಮಾದಲ್ಲಿ ನಿರ್ವಹಿಸುತ್ತಿರುವಾತ 1985ರಲ್ಲಿ ಹುಟ್ಟಿದ ರಣವೀರ್‌ಸಿಂಗ್. ಬಾಲಿವುಡ್‌ನ ಬಾಜಿರಾವ್ ಎಂದೇ ಖ್ಯಾತಿ ಹೊಂದಿರುವ ರಣವೀರ್ ಈಗಾಗಲೇ ಕಪಿಲ್ ಪಾತ್ರದಲ್ಲಿ ಪರಕಾಯಪ್ರವೇಶ ಮಾಡಿದ್ದಾನೆ. ಹೆಜ್ಜೆಹೆಜ್ಜೆಗೂ ಕಪಿಲ್‌ದೇವ್ ಈ ಚಿತ್ರಕ್ಕೆ ಮಾರ್ಗದರ್ಶನ ಮಾಡುತ್ತಿದ್ದಾರೆ. ನಿರ್ದೇಶಕ ಕಬೀರ್ ಖಾನ್, 83ರ ಅಭೂತಪೂರ್ವ ಕ್ರಿಕೆಟ್ ವಿಜಯದ ಬಗ್ಗೆ ಸಿನಿಮಾ ಮಾಡುತ್ತಿದ್ದರೂ, ಇದೊಂದು ರೀತಿಯಲ್ಲಿ ಕಪಿಲ್‌ದೇವ್ ಕುರಿತ ಸಿನಿಮಾದಂತೆಯೇ ಇದೆ! ನಿರ್ಮಾಪಕಿ ದೀಪಿಕಾ ಪಡುಕೋಣೆ ಈ ಸಿನಿಮಾಕ್ಕೆ 125 ಕೋಟಿ ರೂಪಾಯಿ ಸುರಿಯುತ್ತಿದ್ದಾರೆ. ಎಲ್ಲವೂ ಅಂದುಕೊಂಡಂತೆ ನಡೆದರೆ ಇನ್ನು 4 ತಿಂಗಳಲ್ಲಿ ಸಿನಿಮಾ ತೆರೆಗೆ ಬರಲಿದೆ. 2020ರ ಏಪ್ರಿಲ್ 10ರ ಬಿಡುಗಡೆಯ ದಿನಾಂಕವನ್ನೂ ಕಪಿಲ್ ಕೂಡಾ ಕಾಯುತ್ತಿದ್ದಾರೆ. ಸಿನಿಮಾ ಬರುವುದಕ್ಕೆ ಮುನ್ನ ಕಪಿಲ್ ಅವರ ಸಂದರ್ಶನಗಳು ಒಂದರ ಹಿಂದೆ ಒಂದರಂತೆ ತೆರೆ ಕಾಣುತ್ತಿವೆ!

ಕಪಿಲ್‌ದೇವ್ ರಾಮ್‌ಲಾಲ್ ನಿಖಂಜ್, (ಬರ್ತ್‌ಡೇ 6/1/59) ಈಗಲೂ ಸ್ಫುರದ್ರೂಪಿ ತರುಣನಂತೆಯೇ ಇದ್ದಾರೆ. 'ನಾವು ಆಡುತ್ತಿದ್ದ ಕಾಲದಲ್ಲಿ ನೀರನ್ನು ಬಾಟಲಿಗಳಲ್ಲಿ ಮಾರುತ್ತಿರಲಿಲ್ಲ. ಆಯಾ ದೇಶದಲ್ಲಿ ಸಿಗುತ್ತಿದ್ದ ನಳ್ಳಿ ನೀರನ್ನೇ ಕುಡಿದು ಆಡಿದವರು ನಾವು. ಮೈದಾನದಲ್ಲಿ ಹೆಚ್ಚು ಕ್ಯಾಮೆರಾಗಳೂ ಇರುತ್ತಿರಲಿಲ್ಲ. ಮೈದಾನದ ಅಂಚಿನಲ್ಲಿ 2–3 ಸ್ಟ್ಯಾಂಡ್ ಕ್ಯಾಮೆರಾಗಳಿದ್ದರೆ ಅದೇ ಹೆಚ್ಚು. ವಿದೇಶಕ್ಕೆ ಪ್ರಯಾಣ ಹೊರಟರೆ ಆಗ ಸರ್ಕಾರದಿಂದ 250 ಡಾಲರ್ ಕೊಂಡೊಯ್ಯಲು ಅನುಮತಿ ಇರುತ್ತಿತ್ತು ಅಷ್ಟೆ!' ಎಂದು ಹಳೆಯ ನೆನಪುಗಳನ್ನೆಲ್ಲ ಮೊಗೆಮೊಗೆದು ಹೇಳುತ್ತಿದ್ದಾರೆ ಕಪಿಲ್.

83ರಲ್ಲಿ ಭಾರತ ವಿಶ್ವಕಪ್ ಗೆಲ್ಲುವ ನೆಚ್ಚಿನ ತಂಡವೇನೂ ಆಗಿರಲಿಲ್ಲ. ಅದರಲ್ಲೂ ಜಿಂಬಾಬ್ವೆ ವಿರುದ್ಧದ ಪಂದ್ಯ ದಯನೀಯವಾಗಿತ್ತು. ಗಾವಸ್ಕರ್ 0, ಶ್ರೀಕಾಂತ್ 0, ಮೊಹೀಂದರ್ ಅಮರನಾಥ್ 5, ಸಂದೀಪ್ ಪಾಟೀಲ್ 1, ಯಶ್‌ಪಾಲ್ ಶರ್ಮಾ 9– ಹೀಗೆ 17 ರನ್‌ಗೆ 5 ವಿಕೆಟ್‌ಗಳು ಪಟಪಟನೆ ಉರುಳಿದ್ದವು. ರೋಜರ್ ಬಿನ್ನಿ ಕ್ರೀಸ್‌ನಲ್ಲಿದ್ದರು. ಕಪಿಲ್‌ದೇವ್ ಡ್ರೆಸಿಂಗ್ ರೂಮ್‌ನಲ್ಲಿದ್ದ ಬಾತ್‌ರೂಮ್ ಹೊಕ್ಕು ಆರಾಮಕ್ಕೆ ಸ್ನಾನ ಮಾಡುತ್ತಿದ್ದರು. 60 ಓವರ್‌ಗಳ ಪಂದ್ಯವದು. ಸಾಮಾನ್ಯವಾಗಿ ಕಪಿಲ್‌ಗೆ ಬ್ಯಾಟಿಂಗ್ ಬುಲಾವ್ ಬರುತ್ತಿರಲಿಲ್ಲ. ಬಂದರೂ ಅದಾಗಲೇ 50 ಓವರ್‌ಗಳು ದಾಟಿರುತ್ತಿತ್ತು. ಆದರೆ ಈ ಪಂದ್ಯದಲ್ಲಿ ಕರೆ ಬಂದದ್ದೇ ಮೈಮೇಲಿದ್ದ ಸೋಪನ್ನು ಒರೆಸಿಕೊಂಡು ಕಪಿಲ್ ಮೈದಾನಕ್ಕೆ ಓಟಕಿತ್ತರು. 'ಏನು ನಡೆಯುತ್ತಿದೆ ಎನ್ನುವುದೇ ಗೊತ್ತಾಗಲಿಲ್ಲ. ಘಟಾನುಘಟಿಗಳೆಲ್ಲ ಕ್ರೀಸಿಗೆ ಮರಳಿದ್ದರು. 77 ರನ್ ಆಗುವಾಗ ಬಿನ್ನಿ ವಿಕೆಟ್ ಕೂಡಾ ಬಿತ್ತು. ನಾಯಕನಾಗಿ ಎಲ್ಲ ಜವಾಬ್ದಾರಿಯೂ ನನ್ನ ಮೇಲೇ ಇತ್ತು..' ಎಂದು ಕಳೆದ ತಿಂಗಳು ಸಂದರ್ಶನವೊಂದರಲ್ಲಿ ಕಪಿಲ್ ತಣ್ಣಗೆ ಆ ದಿನವನ್ನು ನೆನಪಿಸಿಕೊಳ್ಳುತ್ತಿದ್ದರು.

ಆ ಪಂದ್ಯದಲ್ಲಿ ಕಪಿಲ್ ಇನಿಂಗ್ಸ್ ವಿಶ್ವಕಪ್ ಚರಿತ್ರೆಯ ಸ್ಮರಣಾರ್ಹ ಸಂಗತಿ. ಇನ್ನೊಂದು ತುದಿಯಲ್ಲಿ ವಿಕೆಟ್‌ಗಳು ಉರುಳುತ್ತಿದ್ದರೂ ಏಕಾಂಗಿಯಾಗಿ ಅಬ್ಬರಿಸಿದ ಕಪಿಲ್ 138 ಎಸೆತಗಳಲ್ಲಿ 175 ರನ್ ಹೊಡೆದು ಅಜೇಯರಾಗಿ ಉಳಿದರು. 16 ಬೌಂಡರಿ ಮತ್ತು 6 ಸಿಕ್ಸರ್! ಅಜೇಯ 24 ರನ್ ಗಳಿಸಿದ ಸೈಯದ್ ಕಿರ್ಮಾನಿ ಜೊತೆಗೆ ಕಪಿಲ್ 60ನೇ ಓವರ್‌ಅನ್ನು ಮುಗಿಸಿದಾಗ ಭಾರತದ ಮೊತ್ತ 8ಕ್ಕೆ 266. ಆ ಪಂದ್ಯ ಗೆದ್ದದ್ದು ಅಲ್ಲವಾಗಿದ್ದಲ್ಲಿ ಭಾರತ ಸೆಮಿಫೈನಲ್ ಕೂಡಾ ತಲುಪುತ್ತಿರಲಿಲ್ಲ. ಮುಂದೆ ಸೆಮಿಫೈನಲ್‌ನಲ್ಲಿ 11 ಓವರ್‌ಗಳಲ್ಲಿ 35 ರನ್‌ಗೆ 3 ವಿಕೆಟ್ ಉರುಳಿಸಿ ಇಂಗ್ಲೆಂಡನ್ನು 211 ರನ್‌ಗಳಿಗೆ ಕಟ್ಟಿಹಾಕಿದ್ದು ಇನ್ನೊಂದು ಕಥೆ. ಫೈನಲ್‌ನಲ್ಲಿ ವೆಸ್ಟಿಂಡೀಸ್ ಅನ್ನು ಸದೆಬಡಿದು ವಿಶ್ವಕಪ್ ಎತ್ತಿಕೊಂಡದ್ದು ಕಪಿಲ್ ಹೆಸರನ್ನು ಚಿರಸ್ಥಾಯಿಯಾಗಿಸಿತು.

ಕ್ಯಾಮೆರಾ ಅಂದರೆ ಕಪಿಲ್‌ಗೆ ಭಾರೀ ಭಯ. 'ಒಮ್ಮೆ ಪಂದ್ಯವೊಂದರಲ್ಲಿ ಚೆನ್ನಾಗಿ ಆಡಿದೆ. ಯಾರೋ ಒಬ್ಬರು ಸಂದರ್ಶನಕ್ಕೆ ಬಂದರು. ಒಪ್ಪಿಕೊಂಡು ಕುಳಿತೆ. ಅವರು ಇಂಗ್ಲಿಷ್‌ನಲ್ಲಿ ಪಟಪಟನೆ ಮಾತನಾಡಲು ಶುರು ಮಾಡಿದರು. ಒಂದು ನಿಮಿಷ.. ಎಂದು ಎದ್ದೆ. ಹಿಂಬಾಗಿಲಿನಿಂದ ಹೊರಬಂದು ತಪ್ಪಿಸಿಕೊಂಡೆ' ಎಂದು ತಮ್ಮ 'ಬಡ' ಇಂಗ್ಲಿಷ್ ಕುರಿತು ನಗುತ್ತಾರೆ ಕಪಿಲ್.

ಕಪಿಲ್ ಭಾರತ ಕಂಡ ಅತ್ಯುತ್ತಮ ಆಲ್‌ರೌಂಡರ್. 131 ಟೆಸ್ಟ್ ಮ್ಯಾಚ್, 225 ಏಕದಿನ ಪಂದ್ಯಗಳಲ್ಲಿ ಆಟ. ಟೆಸ್ಟ್‌ನಲ್ಲಿ ಗಳಿಸಿದ ರನ್ 5248 ಮತ್ತು ಏಕದಿನ ಪಂದ್ಯಗಳಲ್ಲಿ 3783. ಓಪನಿಂಗ್ ಬೌಲರ್ ಆಗಿ ಅವರ ಸಾಧನೆ ಅನನ್ಯ. ಟೆಸ್ಟ್ ಇನಿಂಗ್ಸ್‌ನಲ್ಲಿ 23 ಸಲ ಐದು ವಿಕೆಟ್ ಉರುಳಿಸಿದ್ದರೆ (ಒಟ್ಟು ವಿಕೆಟ್ 434), 2 ಸಲ 10 ವಿಕೆಟ್ ಉರುಳಿಸಿದ್ದಾರೆ. ಏಕದಿನ ಪಂದ್ಯಗಳಲ್ಲಿ ಒಟ್ಟು 253 ವಿಕೆಟ್ ಪಡೆದಿದ್ದಾರೆ. ಅಗತ್ಯಬಿದ್ದಾಗ ಬ್ಯಾಟಿಂಗ್ ವೀರನಾಗಿಯೂ ಮೆರೆದ ಕಪಿಲ್ ಒಮ್ಮೆ ಟೆಸ್ಟ್‌ವೊಂದರಲ್ಲಿ 163 ರನ್ ಹೊಡೆದು ಅಗ್ರಪಂಕ್ತಿಯ ಬ್ಯಾಟ್ಸ್‌ಮನ್‌ಗಳಿಗೂ ಬೆರಗು ಹುಟ್ಟಿಸಿದ್ದುಂಟು.

ಮಗಳ ನೆರವಿನಿಂದ ನಾಲ್ಕು ವರ್ಷಗಳ ಹಿಂದೆ ಟ್ವಿಟ್ಟರ್ ಖಾತೆ ಆರಂಭಿಸಿದ ಕಪಿಲ್, ತೀರಾ ಇತ್ತೀಚೆಗೆ ಇನ್‌ಸ್ಟಾಗ್ರಾಮ್ ಖಾತೆ ತೆರೆದಿದ್ದಾರೆ. ಈಗ ಅವರ ಇನ್‌ಸ್ಟಾಗ್ರಾಮ್‌ನಲ್ಲಿ ರಣವೀರ್ ಸಿಂಗ್‌ನ 'ನಟರಾಜ ಶಾಟ್'ಗಳ ಚಿತ್ರಗಳೇ ರಾರಾಜಿಸುತ್ತಿವೆ.

■ ಬಿಂದು

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65